

ಆಲದ ಜಾತಿಯ ಹಣ್ಣುಗಳ ಒಳಗೆ ಬೆಳೆಯುವ ಗಂಡು (ಎಡ) ಮತ್ತು ಹೆಣ್ಣು ಕಣಜಗಳು. ಗಂಡುಗಳು ಒಳಗೆ ಸಾಯುತ್ತವೆ



ನಾಯಿಕೊಡೆ ತನ್ನ ತೃಣಬೀಜಗಳನ್ನು ಪ್ರಸಾರ ಮಾಡಿದ ಮರುಕ್ಷಣವೆ ಸಾಯುತ್ತದೆ

'ಆಯಿತು, ಬದುಕಬೇಕು ಎಂಬ ಗುಣವೂ ನಮ್ಮಲ್ಲಿ ಹಾಗೆಯೇ **hard wiring** ಆಗಿದೆ ಎಂದೆ?'

'ಹಾಗೆನಿಸುತ್ತದೆ. ಇಲ್ಲವಾದಲ್ಲಿ, ನಮ್ಮ ಭಾರತದ ಯೋಧ, ಲ್ಯಾನ್ಸ್ ನಾಯಕ್ ಹನುಮಂತಪ್ಪ ಸಿಯಾಚಿನ್‌ನಲ್ಲಿ 25 ಅಡಿಗಳ ಮಂಜಿನ ಕೆಳಗೆ –45 ಡಿಗ್ರಿಸೆಲ್ಸಿಯಸ್‌ಗಳಷ್ಟು ಕೊರೆಯುವ ಚಳಿಯಲ್ಲೂ, ಆಮ್ಲಜನಕದ ಕೊರತೆ ಇದ್ದರೂ, ಆರು ದಿನಗಳ ಕಾಲ ಬದುಕಲು ಹೋರಾಡುತ್ತಿರಲಿಲ್ಲ. ಆಸ್ಪತ್ರೆಯ ಹಾಸಿಗೆಯಲ್ಲಿ ವಾರಗಟ್ಟಲೆ ನಿರ್ಜೀವ ಶವದಂತೆ ಮಲಗಿರುವ ಎಷ್ಟೋ ಮುದಿ ಜೀವಗಳು, ಜೀವ ಮರಣಗಳ ನಡುವೆ ತುಯ್ದಾಡುತ್ತಿರುವ ಸ್ಥಿತಿಯಲ್ಲೂ, ನೋವು ದುಃಖಗಳನ್ನು ನುಂಗುತ್ತ, 'ಇನ್ನೂ ಬದುಕಬೇಕು' ಎಂಬ ಆಶೋತ್ತರ ತೋರುತ್ತಿರಲಿಲ್ಲ. ಹಾಗೆಯೇ ನೀವು ಕಂಡ ಆ 'ಅಜ್ಞಾತ' ವ್ಯಕ್ತಿಯೂ ಕೂಡ. ವಿಕಾಸದ ದೃಷ್ಟಿಯಲ್ಲಿ ಬದುಕಲು ಕಾರಣವಿಲ್ಲದಿದ್ದರೂ, 'ಬದುಕಬೇಕು' ಎಂಬ **hard wiring**ನಿಂದಾಗಿಯೇ ಆತ ಬದುಕಿದ್ದಾನೆ ಎನ್ನಬಹುದು.'

ಡಾ. ಚಂದ್ರಶೇಖರ್ ಅವರ ಮಾತು ಕೇಳಿ ತಲೆದೂಗುತ್ತಿದ್ದಂತೆ ನನ್ನಲ್ಲಿ ವಿಚಿತ್ರ ಯೋಚನೆಗಳು ಹರಿದಾಡತೊಡಗಿದವು:

'ಪುನರಾಭಿವೃದ್ಧಿಯ ನಂತರ ಸಾವು ಸಾರ್ಥಕತೆ ಪಡೆಯುತ್ತದೆ ಎನ್ನುವುದು ವಿಕಾಸವಾದದ ಅವಲೋಕನ. ವೃದ್ಧರಾದಂತೆ ಎಲ್ಲವನ್ನೂ ತೊರೆದು ವಾನಪ್ರಸ್ಥಾಶ್ರಮಕ್ಕೆ ತೆರಳುವುದನ್ನು ಸೂಚಿಸುವ ನಮ್ಮ ಧಾರ್ಮಿಕ ಚಿಂತನೆಯೂ ವಿಕಾಸವಾದದ ಈ ತಿರುಳನ್ನೇ ಪರೋಕ್ಷವಾಗಿ ಬೋಧಿಸುತ್ತದೆಯೆ? ಅಂದರೆ ವಿಕಾಸವಾದದ ಆ ಛಾಯೆ ನಮ್ಮ ಧಾರ್ಮಿಕ ವಿಧಿಯಲ್ಲೂ ಕಾಣುತ್ತದೆಯೆ? ವೃದ್ಧಾಪ್ಯದಲ್ಲಿ ಮೊಮ್ಮಕ್ಕಳ ಮೇಲಿನ ಮಮಕಾರವು ಜೀವನದ ಮುಖ್ಯ ಉದ್ದೇಶವನ್ನು ಸಾಧಿಸಿದ, ಜೀವನದ ಅಂತ್ಯದತ್ತ ನಡೆಯುವ ಸಾರ್ಥಕತೆಯನ್ನು ಪಡೆದ, ಹಮ್ಮನ್ನು ಪ್ರತಿಬಿಂಬಿಸುತ್ತದೆಯೆ? ಆ ಮಮಕಾರವು ಸಾವನ್ನು ಸ್ವೀಕರಿಸಲು ಸಿದ್ಧವಿರುವ ನಿಚ್ಚಳ ಮನಸ್ಥಿತಿಯ ಪ್ರಕಟಣೆಯೆ? ಹಾಗಿದ್ದೂ ಕೂಡ ಯಯಾತಿ ಏಕೆ ತನ್ನ ಮಗನಿಂದ ಆಯುಸ್ಸನ್ನು (ಯೌವನವನ್ನು) ಪಡೆಯಲು ಮುಂದಾದ? ಕಾರಣ, ಸರಳ: ಸಾವಿನ ಸಾರ್ಥಕತೆಯನ್ನು ಮುಂದೂಡಲು, ಅಂದರೆ ಬದುಕಲು ಜೀವ ಸದಾ ಹೋರಾಡುತ್ತಿರುತ್ತದೆ. 'ಸಾವು' 'ಬದುಕು'ಗಳ ನಡುವಿನ ಈ ವಿಚಿತ್ರ ಜಗ್ಗಾಟದ ನಡುವೆ ಸಿಕ್ಕ ನಮ್ಮೆಲ್ಲರ ಜೀವನ ದಿಕ್ಕುತಪ್ಪಿ ಹಾರುವ ಗಾಳಿಪಟದಂತೆ ಎಂದುಕೊಂಡೆ.

ಪ್ರತಿಕ್ರಿಯಿಸಿ: **feedback@sudha.co.in**